| | | | |
|---|---|---|---|
| 1 | 5054 – ನಬಾರ್ಡ್ | 4.00 | |
| 2 | 4202 – ಕಾಲೇಜು ಶಿಕ್ಷಣ | 3.56 | |
| 3 | 3054 – ಮುಮಂಗ್ರಾರಅ ನಿಧಿ ಯೋಜನೆ | 344.65 | |
| 4 | 2059 – ಯೋಜನೇತರ | 6.13 | |
| 5 | 2216 – ವಸತಿ: ಯೋಜನೇತರ | 0.66 | |
| | ಒಟ್ಟು | 359.00 | |

**155 ಶ್ರೀ ಎಂ.ಟಿ. ಕೃಷ್ಣಪ್ಪ**
**ಮಾನ್ಯ ಗೃಹ ಸಚಿವರು**

ಅ) ತುರುವೇಕೆರೆ ಕ್ಷೇತ್ರ ಹಾಗೂ ತುರುವೇಕೆರೆ ಪಟ್ಟಣದಲ್ಲಿ ಪೊಲೀಸ್ ವಸತಿ ಗೃಹಗಳು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

1. ತುರುವೇಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಾಲಿ 22 ಪೊಲೀಸ್ ವಸತಿಗೃಹಗಳಿದ್ದು, ಇವುಗಳು ಸುಮಾರು 50 ವರ್ಷಗಳ ಹಿಂದಿನವು.

2. ದಂಡಿನಶಿವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಾಲಿ 13 ಪೊಲೀಸ್ ವಸತಿಗೃಹಗಳಿದ್ದು, ಇವುಗಳು ಸುಮಾರು 50 ವರ್ಷಗಳ ಹಿಂದಿನವಾಗಿರುತ್ತವೆ.

3. ಮಾಯಸಂದ್ರ ಪೊಲೀಸ್ ಉಪಠಾಣಾ ವ್ಯಾಪ್ತಿಯಲ್ಲಿ 05 ವಸತಿಗೃಹಗಳಿದ್ದು, ಇವುಗಳು ಸುಮಾರು 25 ವರ್ಷಗಳ ಹಿಂದಿನವಾಗಿರುತ್ತವೆ.

ಆ) ಹಾಗಿದ್ದಲ್ಲಿ, ಹೊಸದಾಗಿ ವಸತಿ ಗೃಹ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ತ್ವರಿತ ವಸತಿ ಯೋಜನೆ-3 ಯೋಜನೆಯಡಿಯಲ್ಲಿ ವಸತಿಗೃಹಗಳ ನಿರ್ಮಾಣಕ್ಕಾಗಿ ಸರ್ಕಾರದ ಅನುಮೋದನೆ ನೀಡಿದ್ದು, ತುರುವೇಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 1-ಪಿಎಸ್ಐ, 9-ಪಿಸಿ ವಸತಿಗೃಹಗಳನ್ನು ನಿರ್ಮಿಸಲಾಗುವುದು.

**156 ಶ್ರೀ ಎಂ.ಟಿ. ಕೃಷ್ಣಪ್ಪ**
**ಮಾನ್ಯ ಗೃಹ ಸಚಿವರು**

ಅ) ತುರುವೇಕೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಮಂಜೂರಾಗಿ ಕಾಮಗಾರಿ ಪ್ರಗತಿಯಲ್ಲಿದ್ದು ಯಾವಾಗ ಪೂರ್ಣಗೊಳಿಸಲಾಗುವುದು;

ತುರುವೇಕೆರೆ ಪಟ್ಟಣಕ್ಕೆ ಒಳಚರಂಡಿ ಕಾಮಗಾರಿಯು ಪ್ರಗತಿಯಲ್ಲಿದ್ದು ಕಾಮಗಾರಿಗಳನ್ನು ಮೇ 2009ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.